# ‘ಬ್ಯುಸಿ’ ಬನ್ಸಾಲಿ



ಸಂಜಯ್ ಲೀಲಾ ಬನ್ಸಾಲಿಯ ಸಿನಿಮಾ ‘ಪದ್ಮಾವತಿ’ ಡಿಸೆಂಬರ್ ಒಂದರಂದು ತೆರೆಗೆ ಬರುವುದು ಖಚಿತವಾಗಿದೆ. ‘ಪದ್ಮಾವತಿ’ಯ ಪೋಸ್ಟರ್‌ನಲ್ಲಿ ದೀಪಿಕಾ ಪಡುಕೋಣೆ, ರಾಣಿಯ ಕಳೆಯಲ್ಲಿ ರಾರಾಜಿಸುತ್ತಿರುವುದನ್ನು ನೋಡಿ ಆಕೆಯ ಅಭಿಮಾನಿಗಳು ಖುಷ್ ಆಗಿದ್ದಾರೆ. ಬನ್ಸಾಲಿ ಸಿನಿಮಾಗಳೆಂದರೆ ಭರ್ಜರಿ ಸೆಟ್‌ಗಳಿಗಾಗಿ ಕೋಟ್ಯಂತರ ರೂಪಾಯಿ ಹಣದ ಹೊಳೆಯೇ ಹರಿಯುತ್ತದೆ. ‘ಪದ್ಮಾವತಿ’ ಕೂಡಾ ಅದಕ್ಕೆ ಹೊರತಲ್ಲ. ಚಿತ್ರದ ಆರಂಭಿಕ ಪ್ರಚಾರಕ್ಕೆಂದೇ ಮೂರು ಕೋಟಿ ರೂಪಾಯಿ ಖರ್ಚಾಗಿದೆ ಎನ್ನುವುದು ಸುದ್ದಿ. ಅದರ ಜತೆಗೇ ವಿವಾದಗಳೂ ಬೆನ್ನು ಹತ್ತಿದ್ದು ಬನ್ಸಾಲಿಗೆ ಭರ್ಜರಿ ಪ್ರಚಾರವಂತೂ ಸಿಗುತ್ತಿದೆ.

‘ಪದ್ಮಾವತಿ’ ಪೋಸ್ಟರ್ ಬಿಡುಗಡೆಯಾದ ದಿನವೇ ರಜಪೂತ ಸಂಘಟನೆಗಳು ಕೆಲವೆಡೆ ಪೋಸ್ಟರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ ವ್ಯಕ್ತಪಡಿಸಿವೆ. ಕೆಲ ತಿಂಗಳ ಹಿಂದೆ ಶೂಟಿಂಗ್ ಸ್ಥಳದಲ್ಲಿ ಹಲ್ಲೆ ನಡೆಸಿ ಈ ಸಂಘಟನೆಗಳು ಬೆಂಕಿ ಹಚ್ಚಿದ್ದು ದೊಡ್ಡ ಸುದ್ದಿಯಾಗಿತ್ತು. ಈ ಮಧ್ಯೆ ಈ ಸಿನಿಮಾ ಯಾವ ರಾಣಿಯ ಬಗ್ಗೆ ಕಥೆ ಹೊಂದಿದೆ ಎನ್ನುವ ವಿವಾದವೂ ಹುಟ್ಟಿಕೊಂಡಿದೆ.

ಬನ್ಸಾಲಿ ಪ್ರಕಾರ, ಚಿತ್ತೋರಿನ ರಾಣಿ ಪದ್ಮಿನಿಯ ಕಥೆಯಿದು. ಅಲ್ಲಾವುದ್ದೀನ್ ಖಿಲ್ಜಿ ದಾಳಿ ಮಾಡಿದಾಗ ರಾಣಿ ಪದ್ಮಿನಿ ಇತರ ರಜಪೂತ ಮಹಿಳೆಯರ ಜತೆಗೆ ಬೆಂಕಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಆದರೆ ಈ ರಾಣಿ ಪದ್ಮಿನಿ 14ನೇ ಶತಮಾನದವಳೋ, 16ನೇ ಶತಮಾನದವಳೋ ಎಂಬ ಬಗ್ಗೆ ಇತಿಹಾಸಜ್ಞರಲ್ಲಿ ಜಿಜ್ಞಾಸೆ ಇದೆ. ರಾಣಿ ಪದ್ಮಿನಿ ಇರಲೇ ಇಲ್ಲ; ಇಡೀ ಕಥೆಯೇ ಕಾಲ್ಪನಿಕ ಎನ್ನುವ ವಾದವೂ ಇದೆ. ಇತಿಹಾಸವನ್ನು ತಪ್ಪಾಗಿ ಚಿತ್ರೀಕರಿಸಲಾಗಿದೆ ಎಂದು ರಜಪೂತ ಸಂಘಟನೆಗಳು ಬೀದಿಗಿಳಿದಿರುವುದು ಚಿತ್ರದ ಬಗ್ಗೆ ಕುತೂಹಲವನ್ನು ಇಮ್ಮಡಿಸಿದೆ. ಬಿಡುಗಡೆಯ ವೇಳೆ ಇನ್ನೇನು ಘಟನೆಗಳು ನಡೆಯುತ್ತವೆಯೋ ಎಂದು ಬಾಲಿವುಡ್ ಕೂಡಾ ಕಾತರದಿಂದಿದೆ. ಆದರೆ ಬನ್ಸಾಲಿ ಮಾತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿ!

# ವಿದ್ಯಾ ಪೂರ್ವಾಶ್ರಮ



ವಿದ್ಯಾ ಬಾಲನ್ ಗರ್ಭಿಣಿ ಹೌದೋ ಅಲ್ಲವೋ ಎಂಬ ಚರ್ಚೆ ಸದ್ಯಕ್ಕೆ ಒತ್ತಟ್ಟಿಗೆ ಸರಿದಂತಿದೆ. ‘ಮದುವೆಯಾದ ಬಳಿಕ ಹೆಣ್ಣುಮಕ್ಕಳು ಸಣ್ಣ ಪುಟ್ಟ ಕಾಯಿಲೆಗೆಂದು ವೈದ್ಯರ ಬಳಿಗೆ ಹೋದರೂ ಎಲ್ಲರೂ ತಾಯಿಯಾಗುವ ಬಗ್ಗೆಯೇ ಮಾತನಾಡುತ್ತಾರೆ. ಇವರಿಗೆ ಬೇರೆ ಕೆಲಸವಿಲ್ಲವೆ? ಈಗಾಗಲೆ ವಿಶ್ವದ ಜನಸಂಖ್ಯೆ ಅಳತೆ ಮೀರಿ ಬೆಳೆಯುತ್ತಿದೆ. ಕೆಲವರಾದರೂ ಮಗು ಮಾಡಿಕೊಳ್ಳದಿರುವ ಬಗ್ಗೆ ಸಂತಸ ಪಡಲಿ’ ಎಂದು ವಿದ್ಯಾ ಕಟುವಾಗಿ ಪ್ರತಿಕ್ರಿಯೆ ನೀಡಿದ ಬಳಿಕ ಆ ಕುರಿತ ಚರ್ಚೆ ಕಡಿಮೆಯಾಗಿದೆ.

ಈ ಮಧ್ಯೆ ವಿದ್ಯಾ ಸಿನಿಮಾಕ್ಕೆ ಸೇರುವ ಮುಂಚಿನ ತಮ್ಮ ಮುಂಬೈ ಬದುಕಿನ ಕುರಿತು ಹೇಳಿದ್ದು ಪ್ರಕಟವಾಗಿದೆ. ಬ್ಯಾನಿಯನ್ ಟ್ರೀ ಎಂಬ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪೆನಿಯಲ್ಲಿ ಕೆಲಸಕ್ಕಿದ್ದ ದಿನಗಳ ಬಗ್ಗೆ, ಬೆಸ್ಟ್ ಬಸ್‌ನಲ್ಲಿ, ಆಟೋದಲ್ಲಿ ಓಡಾಡುತ್ತಿದ್ದ ಆ ಸಣ್ಣ ಸಂಬಳದ ದಿನಗಳ ಬಗ್ಗೆ ವಿದ್ಯಾ ಮಾತುಗಳು ಕುತೂಹಲ ಕೆರಳಿಸುವಂತಿವೆ. ತೀರಾ ಸಾಮಾನ್ಯ ಹುಡುಗಿಯಂತೆ ವಿದ್ಯಾ ತನ್ನ ಬದುಕಿನ ಹಳೆಯ ಪುಟಗಳನ್ನು ಬಣ್ಣಿಸಿರುವುದು ಅಭಿಮಾನಿಗಳಲ್ಲಿ ಇನ್ನಷ್ಟು ಹೆಮ್ಮೆ ಮೂಡಿಸಿದೆ.

■ ಬಿಂದು